**ಪಿಡಬ್ಲ್ಯೂ:1 ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ದಿಃ 05-01-2021.**

ಪಾಟೀ ಸವಾಲು ಃ ಪ್ರತಿವಾದಿ ಪರಃ ಶ್ರೀ ಎಸ್ ಕೆ ಎನ್ ವಕೀಲರಿಂದಃ

ವಾದಿ ನನ್ನ ಅಕ್ಕನ ಗಂಡ. ವಿಲ್ಫ್ರೆಡ್ ಡಿಸೋಜರವರು ವಾದಿಯ ತಮ್ಮ. ಅವರು ರತ್ನಾಕರ ಸುವರ್ಣ ಮತ್ತು ಇತರರ ವಿರುದ್ಧ ಕೇಸು ದಾಖಲಿಸಿದ ವಿಚಾರ ನನಗೆ ಗೊತ್ತಿಲ್ಲ. ನನ್ನ ವಾಸಸ್ಥಳ ಸುರತ್ಕಲ್. ವಾದಿಯು ನ್ಯಾಯಾಲಯದಲ್ಲಿ ಹಾಜರಾಗಿ ಸಾಕ್ಷ್ಯ ನುಡಿಯುವ ಸ್ಥಿತಿಯಲ್ಲಿದ್ದಾರೆ ಎಂದರೆ ಸರಿಯಲ್ಲ, ಅವರಿಗೆ ಅನಾರೋಗ್ಯ ಇದೆ. ಆ ಕುರಿತು ದಾಖಲೆ ಇಲ್ಲ. ವಾದಿಯು ನ್ಯಾಯಾಲಯಕ್ಕೆ ಹಾಜರಾಗಿ ಸಾಕ್ಷ್ಯ ನುಡಿಯುವ ಸ್ಥಿತಿಯಲ್ಲಿ ಇದ್ದಾರೆ, ಅವರಿಗೆ ಯಾವುದೇ ಅನಾರೋಗ್ಯ ಇಲ್ಲ ಎಂದರೆ ಸರಿಯಲ್ಲ.

2. ದಾವಾ ಎ ಸ್ವತ್ತುಗಳು ಮೊದಲು ಡೇವಿಯಲ್ ಡಿಸೋಜರವರ ಗೇಣಿ ಹಕ್ಕಿನ ಆಸ್ತಿಗಳಾಗಿದ್ದವು ಎಂದರೆ ಸರಿಯಲ್ಲ, ಅದು ಅವರ ವರ್ಗ ಹಕ್ಕಿನ ಆಸ್ತಿ. ಸದರಿ ಆಸ್ತಿಗಳ ಮೇಲೆ ವಾದಿಯ ತಂದೆ ಡೇವಿಯಲ್‌ಗೆ ಹೇಗೆ ಹಕ್ಕು ಬಂದಿತು ಎಂದು ನನಗೆ ನೆನಪಿಲ್ಲ. ವಾದಿಗೆ ದಾವಾ ಎ ಅನುಸೂಚಿ ಆಸ್ತಿಗಳನ್ನು ಅವರಿಗೆ ಅವರ ತಂದೆ ಕೊಟ್ಟಿದ್ದರಿಂದ ಹಕ್ಕು ಬಂದಿದೆ. ವಾದಿಯ ತಂದೆಗೆ ಸದರಿ ಆಸ್ತಿಗಳು ಭೂನ್ಯಾಯ ಮಂಡಳಿಯಿಂದ ಗೇಣಿಯ ಮೂಲಕ ಬಂದ ಆಸ್ತಿಗಳು ಎಂದರೆ ನನಗೆ ಗೊತ್ತಿಲ್ಲ. ಈ ದಾವಾ ಎ ಆಸ್ತಿಗಳ ಬಗ್ಗೆ ಭೂನ್ಯಾಯ ಮಂಡಳಿಯಲ್ಲಿ ಇರುವ ದಾಖಲೆಗಳನ್ನು ಪರಿಶೀಲಿಸಿ ಮಾಹಿತಿ ಪಡೆದುಕೊಂಡಿದ್ದೀರಾ ಎಂದರೆ ಇಲ್ಲ.

3. ನಿಪಿ-12 ದಾಖಲೆಯನ್ನು ಓದಿ ತಿಳಿದುಕೊಂಡಿದ್ದೀರಾ ಎಂದರೆ ನನಗೆ ಇಂಗ್ಲೀಷ್ ಬರುವುದಿಲ್ಲ. ಅದನ್ನು ನನ್ನ ವಕೀಲರು ಓದಿ ಹೇಳಿದ್ದಾರೆ, ತಿಳಿದುಕೊಂಡಿದ್ದೇನೆ. ಸದರಿ ದಾಖಲೆಯೊಂದಿಗೆ ನಕ್ಷೆ ಹಾಜರುಪಡಿಸಿ ನೋಂದಣಿ

ಮಾಡಿಸಿರುವ ಬಗ್ಗೆ ತಿಳಿದುಕೊಂಡಿದ್ದೀರಾ ಎಂದರೆ ನೆನಪಿಲ್ಲ. ನಿಪಿ-12 ರ ಮೂಲ ದಾಖಲೆ ಎಲ್ಲಿದೆ ಎಂದು ಗೊತ್ತಿಲ್ಲ. ಈ ಕೇಸಿನ ಜಾಗದ ಬಗ್ಗೆ ಹಾಗೂ ವ್ಯವಹಾರದ ಬಗ್ಗೆ ಏನೂ ಗೊತ್ತಿಲ್ಲ ಎಂದರೆ ಜಾಗ ನೋಡಿದ್ದೇನೆ. ಈ ಕೇಸಿನ ಜಾಗದ ಬಗ್ಗೆ ಮತ್ತು ವ್ಯವಹರಣೆಯ ಬಗ್ಗೆ ಮಾಹಿತಿ ಇದೆ ಎಂದರೆ ಇದ್ದ ಮಾಹಿತಿಯನ್ನು ಹಾಜರುಪಡಿಸಿದ್ದೇನೆ. ಹಾಜರುಪಡಿಸಿರುವ ದಾಖಲೆಗಳನ್ನು ಬಿಟ್ಟು ಬೇರೆ ಮಾಹಿತಿ ಇಲ್ಲ ಎಂದರೆ ಇದ್ದುದ್ದನ್ನು ಹಾಜರುಪಡಿಸಿರುತ್ತೇನೆ. ನಿಪಿ-12 ಕ್ಕೆ ಲಗತ್ತಿಸಿದ ನಕ್ಷೆ ನೋಡಿದ್ದೇನೆ. ಸದರಿ ನಕ್ಷೆ ಅದರೊಂದಿಗೆ ಇರಬೇಕು. ಸದರಿ ನಕ್ಷೆ ನಿಪಿ-12 ರೊಂದಿಗೆ ಇದ್ದುದ್ದನ್ನು ನೋಡಿದ್ದೇನೆ. ಸದರಿ ನಕ್ಷೆಯನ್ನು ಹಾಜರುಪಡಿಸದೆ ಇರಲು ಕಾರಣ ಏನು ಎಂದರೆ ನಾನು ಇದ್ದುದ್ದನ್ನು ಹಾಜರುಪಡಿಸಿದ್ದೇನೆ, ಉಳಿದದ್ದು ಗೊತ್ತಿಲ್ಲ. ಸದರಿ ನಕ್ಷೆ ಹಾಜರುಪಡಿಸಿದ್ದಲ್ಲಿ ದಾವಾ ಎ ಸ್ವತ್ತುಗಳು ಎಲ್ಲಿವೆ ಎಂದು ಸ್ಪಷ್ಟವಾಗಿ ಗುರುತಿಸಲು ಆಗುತ್ತದೆ ಎಂದರೆ ಸರಿ.

**4.** ದಾವಾ ಬಿ ಅನುಸೂಚಿ ಆಸ್ತಿ ಪ್ರತಿವಾದಿಯ ಸ್ವಾಧೀನದಲ್ಲಿದೆ ಎಂದರೆ ಸರಿ. ದಾವಾ ಬಿ ಅನುಸೂಚಿಯ **0.08** ಎಕರೆ ಆಸ್ತಿ ಸ.ನಂಃ **360/1** ರ ಅಂಶ ಎಂದರೆ ಹೌದು. ಅದರಲ್ಲಿ ಪ್ರತಿವಾದಿಯರು ವಾಸಿಸುತ್ತಿರುವ ಮನೆ ಇದೆ ಎಂದರೆ ಅದರಲ್ಲಿ ಶೆಡ್ ಕಟ್ಟಿದ್ದಾರೆ. ಅವರ ಹೆಂಡತಿ ಮಕ್ಕಳು ಅಲ್ಲಿಯೇ ವಾಸವಿದ್ದಾರೆ ಎಂದರೆ ಅಲ್ಲಿ ಅವರು ಈಗ ಇದ್ದಾರೆ. ಸದರಿ ಮನೆಗೆ ನಿಟ್ಟೆ ಗ್ರಾಮ ಪಂಚಾಯತಿಯಿಂದ ಖಾತೆ ಮಾಡಲಾಗಿದೆ ಎಂದರೆ ಅದು ಫೋರ್ಜರಿ ಖಾತೆ. ಮನೆ ತೆರಿಗೆಯನ್ನು ಸಹ ಫೋರ್ಜರಿಯಿಂದ ಪಾವತಿಸುತ್ತಿದ್ದಾರೆ. ಸದರಿ ಮನೆಗೆ ಸಂಬಂಧಿಸಿದಂತೆ ರೇಷನ್ ಕಾರ್ಡ್ ಸಹ ಇದೆ ಎಂದರೆ ಅದನ್ನು ಫೋರ್ಜರಿ ಮಾಡಿ ತೆಗೆದುಕೊಂಡಿದ್ದಾರೆ. ಸದರಿ ಮನೆಗೆ ಮತದಾರರ ಗುರುತಿನ ಚೀಟಿ ಸಹ ಪ್ರತಿವಾದಿಯರ ಹೆಸರಿಗೆ ಇದೆ ಎಂದರೆ ಅದನ್ನೂ ಸಹ ಫೋರ್ಜರಿ ಮಾಡಿ ಪಡೆದಿರುತ್ತಾರೆ.

**5.** ಸ.ನಂಃ **360/1** ರಲ್ಲಿ ಕೃಷಿಗೆ ಮತ್ತು ನಿವೇಶನಕ್ಕೆ ಮಂಜೂರು ಮಾಡಲಾಗಿದೆ ಎಂದರೆ ಅದು ನನಗೆ ಗೊತ್ತಿಲ್ಲ. ನಿಪಿ-5 ಆರ್ ಟಿ ಸಿ ಯನ್ನು ನೋಡಿ ತಿಳಿದುಕೊಂಡಿಲ್ಲ. ದಾವಾ ಎ ಅನುಸೂಚಿ ಸ್ವತ್ತು ಬಿ ಅನುಸೂಚಿ ಸ್ವತ್ತಿನ ಯಾವ

ದಿಕ್ಕಿನಲ್ಲಿದೆ ಎಂದರೆ ಹೇಳಲು ಸಾಧ್ಯ ಇಲ್ಲ. ದಾವಾ ಬಿ ಅನುಸೂಚಿ ಆಸ್ತಿಯ ಅಳತೆ ಮಾಡಿ ನಕ್ಷೆ ಪಡೆದುಕೊಂಡಿದ್ದೀರಾ ಎಂದರೆ ಮೊದಲು ಮಾಡಿಸಿದ್ದೆವು, ಅದು ಸರಿ ಆಗಲಿಲ್ಲ. ಸದರಿ ಬಿ ಸ್ವತ್ತು **0.08** ಎಕರೆ ಎಂದು ಯಾವ ಆಧಾರದ ಮೇಲೆ ಹೇಳಿದ್ದೀರಿ ಎಂದರೆ ಅದು ನಮ್ಮ ದಾವಾ ಎ ಆಸ್ತಿಯ ಗಡಿಯ ಒಳಗೆ ಇದೆ. ದಾವಾ ಎ ಅನಸೂಚಿ ಸ್ವತ್ತಿನ ನಕ್ಷೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಇದ್ದುದ್ದನ್ನು ಹಾಜರುಪಡಿಸಿದ್ದೇನೆ.

**6.** ವಾದಿಯ ತಂದೆ ವಾದಿಗೆ ಸ್ವತ್ತನ್ನು ಕೊಟ್ಟ ರೀತಿಯೇ ತನ್ನ ಇತರ ಮಕ್ಕಳಿಗೂ ಸಹ ದಾನಪತ್ರದ ಮೂಲಕ ಸ್ವತ್ತನ್ನು ನೀಡಿದ ವಿಚಾರ ತಿಳಿದುಕೊಂಡಿದ್ದೀರಾ ಎಂದರೆ ಇಲ್ಲ, ಅವರ ಹೆಸರಿನಲ್ಲಿ ಇರುವುದನ್ನು ತಿಳಿದುಕೊಂಡಿದ್ದೇನೆ. ವಿಲ್ಫ್ರೆಡ್‌ರವರ ಸ್ವತ್ತಿನ ಸ್ಥಿರಾಸ್ತಿ ಸ. ನಂಃ **58** ಎಂದರೆ ನನಗೆ ಗೊತ್ತಿಲ್ಲ. ದಾವಾ ಎ ಅನುಸೂಚಿ ಸ್ವತ್ತುಗಳು ಒಂದೇ ಆವರಣದಲ್ಲಿ ಇವೆ ಎಂದರೆ ಸರಿ. ಅದರ ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣಕ್ಕೆ ಯಾರ ಆಸ್ತಿಗಳು ಇವೆ ಎಂದು ಹೇಳಲು ಆಗುವುದಿಲ್ಲ. ದಾವಾ ಬಿ ಅನುಸೂಚಿ ಸ್ವತ್ತಿನ ಮಂಜೂರಾತಿಗಾಗಿ ಪ್ರತಿವಾದಿ ಅರ್ಜಿ ಸಲ್ಲಿಸಿರುವ ವಿಚಾರ ನನಗೆ ಗೊತ್ತಿಲ್ಲ, ಆದರೆ ಅವರು ಅದಕ್ಕೆ ಫೋರ್ಜರಿ ದಾಖಲೆ ಮಾಡಿಕೊಂಡಿದ್ದಾರೆ. ದಾವಾ ಬಿ ಸ್ವತ್ತಿನ ಪಕ್ಕದಲ್ಲಿ ಸ.ನಂಃ **61** ಮತ್ತು **62** ರ ಸ್ವತ್ತು ಇವೆ ಎಂದರೆ ಇರಬಹುದು, ನನಗೆ ಗೊತ್ತಿಲ್ಲ.

**7.** ತುಂಬು ಹೆಂಗ್ಸು ಪ್ರತಿವಾದಿಯ ಅಜ್ಜಿ. ಅವರು ಪ್ರತಿವಾದಿಯ ಮನೆಯ ಹತ್ತಿರ ಇದ್ದಾರೆ ಎಂದರೆ ಹೌದು. ಸ.ನಂಃ **61** ಮತ್ತು **62** ರ ಸ್ವತ್ತುಗಳಲ್ಲಿ ವಾದಿಗೆ ಯಾವುದೇ ಹಕ್ಕು ಇಲ್ಲ ಎಂದರೆ ಇರಬಹುದು, ನನಗೆ ಗೊತ್ತಿಲ್ಲ. ವಾದಿಯ ಎಲ್ಲಾ ಆಸ್ತಿಗಳ ಬಗ್ಗೆ ಮಾಹಿತಿ ಇದೆ. ಸ.ನಂಃ **61** ಮತ್ತು **62** ವಾದಿಯ ಹೆಸರಿನಲ್ಲಿಲ್ಲ ಎಂದರೆ ಅದನ್ನು ನಾನು ನೋಡಿಲ್ಲ. ಸ.ನಂಃ **360/1** ಸ್ಥಿರಾಸ್ತಿಯಲ್ಲಿ ವಾದಿಗೆ ಮಂಜೂರಾಗಿಲ್ಲ ಎಂದರೆ ಸಾಕ್ಷಿಯು ಅದು ಅವರ ಕುಮ್ಕಿ ಹಕ್ಕು ಎಂದು ಮಾತ್ರ ನನಗೆ ಗೊತ್ತಿಲ್ಲ. ಕುಮ್ಕಿ ಹಕ್ಕು ಎಂದು ತೋರಿಸಲು ಕಂದಾಯ ಇಲಾಖೆಯವರು ಮಾಡಿರುವ ಆದೇಶ ಇದೆಯೇ ಎಂದರೆ ಈಗ ಬಂದಿದೆ. ಕಲಂ **53** ರಡಿಯಲ್ಲಿ ಕುಮ್ಕಿ

ಹಕ್ಕಿನ ಮಂಜೂರಾತಿಗಾಗಿ ಅರ್ಜಿ ಸಲ್ಲಿಸಿರುವುದು ಇದೆ. ಅದು ಏನಾಗಿದೆ ಎಂದು ಗೊತ್ತಿಲ್ಲ. ಸ.ನಂಃ **360/1** ರ ಒಟ್ಟು ವಿಸ್ತೀರ್ಣ **338.00** ಎಕರೆ ಎಂದು ತಿಳಿದುಕೊಂಡಿದ್ದೀರಾ ಎಂದರೆ ಇಲ್ಲ. ದಾವಾ ಎ ಅನುಸೂಚಿ ಆಸ್ತಿಯ ಜೊತೆಗೆ ವಾದಿಯ ಇತರ ಸಹೋದರ ಸಹೋದರಿಯರಿಗೆ ಸೇರಿದ ಆಸ್ತಿಗಳು ಇವೆ ಎಂದರೆ ಸರಿ. ಸದರಿ ಸ.ನಂಃ **360/1** ರಲ್ಲಿ ಮಂಜೂರಾದ ಕೃಷಿ ಜಾಗ ಹಾಗೂ ಮನೆ ನಿವೇಶನಗಳನ್ನು ವಾದಿಯು ಪ್ರಶ್ನಿಸಿದ್ದಾರೆಯೇ ಎಂದರೆ ನಮ್ಮ ಕುಮ್ಕಿ ಜಾಗದಲ್ಲಿ ಅದು ಆಗಿರುವುದಿಲ್ಲ.

**8.** ಪ್ರತಿವಾದಿಯ ಮನೆಯ ಬಳಿ ತನಿಯ ಮೈಲಿ, ಪ್ರಭಾಕರ ದೇವಾಡಿಗರ ಮನೆಗಳು ಇವೆ ಎಂದರೆ ಇರಬಹುದು. ಅದೇ ರೀತಿ ಇತರೆ ಬಾಬು ಹರಿಜನ, ಮಂಜುನಾಥ, ಇಂದಿರಾ, ಸಂಜೀವಿನಿ, ರತ್ನಾವತಿ, ಅಪ್ಪು, ಗೋಪಿ ಇವರ ಮನೆಗಳು ಸಹ ಪ್ರತಿವಾದಿಯ ಮನೆಯ ಬಳಿ ಇವೆ ಎಂದರೆ ಇರಬಹುದು, ನನಗೆ ಗೊತ್ತಿಲ್ಲ. ಸದರಿ ಎಲ್ಲಾ ಮನೆಗಳು ಸಹ ಸ.ನಂಃ **360/1** ರಲ್ಲಿ ಇವೆ ಎಂದರೆ ನಮ್ಮ ಕುಮ್ಕಿ ಜಾಗ ಬಿಟ್ಟು ಇವೆ. ಮೇಲೆ ಹೇಳಿದ ಎಲ್ಲವೂ ಕೂಡಾ ಸರ್ಕಾರದಿಂದ ಕೊಡಲ್ಪಟ್ಟ ನಿವೇಶನಗಳು ಎಂದರೆ ಇರಬಹುದು. ಪ್ರತಿವಾದಿಯ ಮನೆ ಸ.ನಂಃ **360/1** ರ ಪಶ್ಚಿಮಕ್ಕೆ ಇದೆ ಎಂದರೆ ಅದನ್ನು ನನಗೆ ಹೇಳಲು ಬರುವುದಿಲ್ಲ. ಸ.ನಂಃ **360/1** ರಲ್ಲಿ ದಾವಾ ಎ ಅನುಸೂಚಿ ಸ್ವತ್ತುಗಳಿಗೆ ಯಾವುದೇ ಕುಮ್ಕಿ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಸ.ನಂಃ **360/1** ರ ಪಕ್ಕದಲ್ಲಿ ದಾವಾ ಎ ಅನುಸೂಚಿ ಆಸ್ತಿಗಳೇ ಇಲ್ಲ ಎಂದರೆ ಸರಿಯಲ್ಲ, ಎರಡೂ ಕಡೆ ಸಹ ಇವೆ.

**9.** ಪ್ರತಿವಾದಿಯ ವಿರುದ್ಧ ವಾದಿಯ ಪರವಾಗಿ ಕಂದಾಯ ಇಲಾಖೆಗೆ ನಾನೇ ಖುದ್ದು ದೂರು ಅರ್ಜಿ ಸಲ್ಲಿಸಿರುತ್ತೇನೆ. ಸದರಿ ಅರ್ಜಿಯ ಮೇಲೆ ಅಳತೆಯಾಗಿದೆ, ಕೇಸು ಸಹ ಆಗಿದೆ. ಸದರಿ ಅರ್ಜಿಯ ಸಂಬಂಧ ಕೋರ್ಟಿನಲ್ಲಿ ನನ್ನ ವಿಚಾರಣೆ ಆಗಿದೆ ಎಂದರೆ ಅದು ಸರಿ ಬರಲಿಲ್ಲ. ಅದರಲ್ಲಿ ನಾನು ಸಾಕ್ಷ್ಯ ಹೇಳಿರುವ ಬಗ್ಗೆ ನೆನಪಿಲ್ಲ.

**10.** ಸಾಕ್ಷಿಗೆ ಈ ಹಂತದಲ್ಲಿ ಸಿಸಿ ನಂಃ **508/11** ರ ಸಾಕ್ಷಿ ವಿಚಾರಣೆಯ ದೃಢೀಕೃತ ನಕಲು ತೋರಿಸಿದ್ದು, ಅದನ್ನು ನೋಡಿ ಒಪ್ಪಿದ್ದರಿಂದ ಅದನ್ನು ನಿಡಿ-**1** ಎಂದು ಗುರುತಿಸಲಾಯಿತು. ಅದು ಸದರಿ ಪ್ರಕರಣದಲ್ಲಿ ನಾನು ಸಾಕ್ಷ್ಯ ನುಡಿದ ದಾಖಲೆಯಾಗಿರುತ್ತದೆ. ಸದರಿ ಪ್ರಕರಣದಲ್ಲಿ ಪ್ರತಿವಾದಿ/ಆರೋಪಿ ಖುಲಾಸೆಯಾಗಿರುವ ವಿಚಾರ ತಿಳಿದುಕೊಂಡಿದ್ದೇನೆ. ಸದರಿ ಪ್ರಕರಣದಲ್ಲಿ ತನಿಖಾ ವೇಳೆಯಲ್ಲಿ ಸ್ಥಳ ಅಳತೆ ಮಾಡಿದ ಬಗ್ಗೆ ನಕ್ಷೆಯನ್ನು ತಾಲೂಕು ಕಚೇರಿಯಿಂದ ಈ ಪ್ರಕರಣದಲ್ಲಿ ಹಾಜರುಪಡಿಸಲು ಪಡೆದುಕೊಳ್ಳಲು ಪ್ರಯತ್ನಿಸಿದ್ದೀರಾ ಎಂದರೆ ಇಲ್ಲ. ಆ ಕೇಸಿನಲ್ಲಿ ಹಾಜರುಪಡಿಸಿದ ನಕ್ಷೆಯ ಬಗ್ಗೆ ಕೇಳಿ ತಿಳಿದುಕೊಂಡಿರುತ್ತೇನೆ. ಸದರಿ ನಕ್ಷೆಯ ಪ್ರಕಾರ ದಾವಾ ಬಿ ಆಸ್ತಿ ನಮ್ಮ ವರ್ಗ ಜಾಗದ ಕುಮ್ಕಿ ಹಕ್ಕಿನಲ್ಲಿ ಬರುತ್ತದೆ ಎಂದರೆ ನಮೂದಿಸಿರುತ್ತಾರೆ. ಆರೋಪಿ/ಪ್ರತಿವಾದಿ ಖುಲಾಸೆಗೊಂಡ ತೀರ್ಪಿನ ವಿರುದ್ಧ ಅಪೀಲು ಸಲ್ಲಿಸಿದ್ದೀರಾ ಎಂದರೆ ಈ ಕೇಸನ್ನು ದಾಖಲಿಸಿದ್ದೇನೆ ಎಂದು ಸಾಕ್ಷ್ಯ ನುಡಿಯುತ್ತಾರೆ.

**11.** ನಾನು ಸಲ್ಲಿಸಿದ ಅರ್ಜಿ ಎನ್ ಸಿ ಆರ್ **28/09-10** ವಜಾ ಆಗಿದೆ ಎಂದರೆ ಸರಿಯಲ್ಲ. ನಾನು ಕಂದಾಯ ಇಲಾಖೆಗೆ ಸಲ್ಲಿಸಿದ ಅರ್ಜಿಯ ಮೇರೆಗೆ ಕಂದಾಯ ಇಲಾಖೆಯವರು ಏನು ಕ್ರಮ ತೆಗೆದುಕೊಂಡಿದ್ದಾರೆ ಎಂದು ಮಾಹಿತಿ ತಿಳಿದುಕೊಂಡಿದ್ದೇನೆ. ಸದರಿ ಮಾಹಿತಿ ನನ್ನ ಬಳಿ ಇದೆ, ಅದನ್ನು ಹಾಜರುಪಡಿಸಲು ತೊಂದರೆ ಇಲ್ಲ.

ಮುಂದುವರಿದ ಪಾಟೀ ಸವಾಲಿಗೆ ವಕೀಲರು ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರ.ಸಿ.ನ್ಯಾ. ಮತ್ತು ಪ್ರ.ದ.ನ್ಯಾ.ದಂ., ಕಾರ್ಕಳ